ಪಂಗೆಲ್ಲ ರೂ. ೬೦೦ ಬೆಲೆ ಬಾಳುವ ಕಟ್ಟಡ ಸಾಮಗ್ರಿಗಳನ್ನು ಒದಗಿಸಲು ಅವಕಾಶವಿದೆ. ಇಂತಹ ನೊಂದ ಕುಟುಂಬದ ವಾರ್ಷಿಕ ವರಮಾನ ೩,೫೦೦ ರೂ.ಗಳಿಗಿಂತ ಕಡಿಮೆ ಇರಬೇಕು. ವಾರ್ಷಿಕ ವರಮಾನ ೩,೫೦೦ ರೂ.ಗಳಿಗಿಂತ ಹೆಚ್ಚಾಗಿದ್ದು, ಪಟ್ಟ ನಷ್ಟ ಬಹಳವಾಗಿದೆ ಮತ್ತು ಅಂತಹವರಿಗೆ ಪರಿಹಾರ ನೀಡುವುದು ಅಗತ್ಯ ಎಂದು ಜಿಲ್ಲಾಧಿಕಾರಿಗಳು ಪರಿಗಣಿಸಿದಂತಹ ಪ್ರಕರಣಗಳನ್ನು ಸೂಕ್ತ ಶಿಫಾರಸ್ಸುಗಳೊಂದಿಗೆ, ಪ್ರಸ್ತಾವನೆಗಳನ್ನು ಸರಕಾರಕ್ಕೆ ಕಳುಹಿಸುತ್ತಾರೆ.

ಚಿಕ್ಕನಾಯಕನಹಳ್ಳಿ ಸುಲೇನೂರುಗ್ರಾಮ ವಾಸಿಯೊಬ್ಬರು ಶ್ರೀ ಕೋಳಿ ಕರಿಯಪ್ಪ ಮೃತಪಟ್ಟಿದ್ದು, ಇವರ ಕುಟುಂಬದವರಿಗೆ ಯೋಜನೆಯಡಿಯಲ್ಲಿ ದೊರಕಬಹುದಾದ ಪರಿಹಾರವನ್ನು ನೀಡುವ ಕ್ರಮವನ್ನು ಸಹಾಯಕ ಆಯುಕ್ತರು ಕೈಗೊಳ್ಳುತ್ತಿದ್ದಾರೆ. ಈ ಯೋಜನೆಯಡಿಯಲ್ಲಿ ಗರಿಷ್ಠ ಐದು ಸಾವಿರ ರೂಪಾಯಿಗಳ ಪರಿಹಾರ ನೀಡಲು ಅವಕಾಶವಿರುತ್ತದೆ.

೪) ಕಾಪು ಕ್ಷೇತ್ರದ ಮಂಟ್ಪ ಗ್ರಾಮದಲ್ಲಿ ಹೊಸದಾದ ಟ್ರಾನ್ಸ್‌ಫಾರ್ಮರ್ ಹಾಕುವುದರ ಬಗ್ಗೆ.—

ಶ್ರೀ ವಸಂತ ವಿ.ಸಾಲಿಯಾನ್.—ಕಾಪು ಕ್ಷೇತ್ರದ ಮಂಟ್ಪ ಗ್ರಾಮದಲ್ಲಿ ನೂರಾರು ಇಲೆಕ್ಟ್ರಿಕ್ ಪಂಪ್‌ಸೆಟ್ಟುಗಳನ್ನು ಬಳಸಿ ರೈತರು ಕೃಷಿ ಕೆಲಸವನ್ನು ನಡೆಸುತ್ತಿದ್ದಾರೆ. ಅಲ್ಲಿ ವಿದ್ಯುತ್ ಸರಬರಾಜು ಸರಿಯಾಗಿ ನಡೆಯದ ಕಾರಣ ಮತ್ತು ವಿದ್ಯುಚ್ಛಕ್ತಿ ಸರಬರಾಜಿನ ತೊಂದರೆಯಿಂದಾಗಿ ಕೃಷಿಗೆ ಸರಿಯಾಗಿ ನೀರು ಒದಗಿಸಲು ತೊಂದರೆಯಾಗಿದೆ. ಇದರಿಂದಾಗಿ ಅಲ್ಲಿ ಹೊಸದಾದ ಟ್ರಾನ್ಸ್‌ಫಾರ್ಮರ್ ಬೇಕಾಗಿದ್ದು, ಇಲಾಖೆಯವರು ಪರಿಶೀಲಿಸಿ ಟ್ರಾನ್ಸ್‌ಫಾರ್ಮರ್ ಒದಗಿಸುವ ಭರವಸೆ ನೀಡಿದ್ದರು. ಇದಕ್ಕೆತಗಲುವ ಇತರ ವೆಚ್ಚದ ಬಗ್ಗೆ ಊರಿನವರು ಸೇರಿಕೊಂಡು ಇಲಾಖೆಗೆ ಸಹಾಯ ಮಾಡಿರುತ್ತಾರೆ. ಆದರೆ ವಿದ್ಯುತ್ ಇಲಾಖೆಯವರು ಈ ತನಕ ಸಾಮಗ್ರಿಗಳ ಕೊರತೆಯಿಂದ ಹೊಸತಾದ ಟ್ರಾನ್ಸ್‌ಫಾರ್ಮರನ್ನು ಒದಗಿಸಿಕೊಡಲಿಲ್ಲ. ಇದರಿಂದಾಗಿ ಅಲ್ಲಿಯ ಕೃಷಿಕರಿಗೆ ತೊಂದರೆಯಾಗಿದ್ದು, ಸರ್ಕಾರವು ಈ ಬಗ್ಗೆ ಕೂಡಲೇ ಪರಿಶೀಲಿಸಿ ಆ ಗ್ರಾಮದ ರೈತರಿಗೆ ನ್ಯಾಯ ಒದಗಿಸಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಸದಸ್ಯರು ಕೇಳಿದ ವಿಚಾರಕ್ಕೆ ಎಷ್ಟು ಪ್ರಯತ್ನ ಪಟ್ಟರೂ ಕೂಡ ಅಲ್ಲಿಂದ ಸಂಪರ್ಕ ಮಾಡಿ ವಿವರಣೆಗಳನ್ನು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಆದರೂ ಕೂಡ ಅಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ನ್ನು ಒದಗಿಸಿಕೊಡುವುದಕ್ಕೆ ತಕ್ಷಣ ವ್ಯವಸ್ಥೆ ಮಾಡುತ್ತೇನೆ ಎಂಬುದನ್ನು ಹೇಳುತ್ತೇನೆ.

೫ ದಕ್ಷಿಣ ಕನ್ನಡದ ಹಜ್‌ಯಾತ್ರಿಕರಿಗೆ ಮಂಗಳೂರಿನಲ್ಲಿಯೇ ಚುಚ್ಚುಮದ್ದು ಹಾಕಿಸಲು ಮನವಿ

ಶ್ರೀ ಬಿ.ಎಂ.ಇದಿನಬ್ಬ.—ಹಜ್ ಯಾತ್ರೆ ಕೈಗೊಳ್ಳುವವರು ಈ ವರ್ಷದಿಂದ ಬೆಂಗಳೂರಿನಿಂದ ರೋಗನಿರೋಧಕಚುಚ್ಚುಮದ್ದು ಹಾಕಿಸಿಕೊಳ್ಳಬೇಕೆಂದು ರಾಜ್ಯಸರ್ಕಾರ ಆದೇಶಹೊರಡಿಸಿರುತ್ತದೆ. ಈ ಮೊದಲಿನವರ್ಷಗಳಲ್ಲಿ ಆಯಾಯ ಜಿಲ್ಲೆಯಲ್ಲಿ ಚುಚ್ಚುಮದ್ದು ತೆಗೆದುಕೊಳ್ಳುವ ಅವಕಾಶ ಸೌಲಭ್ಯವಿತ್ತು. ಇದೀಗದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಐನೂರಕ್ಕೂ ಮೇಲ್ಪಟ್ಟು ಹಜ್‌ಯಾತ್ರಿಕರಿದ್ದಾರೆ. ೫ ರೂಪಾಯಿ ಬೆಲೆಯ ಈ ಚುಚ್ಚುಮದ್ದನ್ನು ಹಾಕಿಸಲು ೫೦೦ ರೂಪಾಯಿ ಖರ್ಚು ಮಾಡಿ ಯಾತ್ರಿಕರು ಬೆಂಗಳೂರಿಗೆ ಬರುವುದರಿಂದ ಭಾರೀ ತೊಂದರೆ ಮತ್ತು ಕಷ್ಟಗಳಾಗುತ್ತಿವೆ. ಈಗಿನ ಹೊಸ ಕ್ರಮ ಬೇರಾವ ರಾಜ್ಯದಲ್ಲಿಯೂ ಇರುವುದಿಲ್ಲ. ಆದ ಕಾರಣ ದಕ್ಷಿಣ ಕನ್ನಡದ ಹಜ್ ಯಾತ್ರಿಕರಿಗೆ ಮಂಗಳೂರಿನಲ್ಲೇ ಚುಚ್ಚುಮದ್ದು ಹಾಕಿಸಿಕೊಳ್ಳುವಂತೆ ಅತೀಶೀಘ್ರವೇ ಆದೇಶ ನೀಡಿ ಉಪಚರಿಸಬೇಕು. ಇದು ಅತೀ ಪ್ರಾಮುಖ್ಯ ಕೂಡ ಈ ಕುರಿತು ಆರೋಗ್ಯ ಸಚಿವರ ಗಮನ ಸೆಳೆಯುತ್ತೇನೆ.